Tumkur ..	9	Tumkur, Gubbi, Sira, Pavagada, Madhugiri, Chiknaikanhalli, Tiptur, Koratagere and Turuvekere.
Chitaldrug ..	9	All the nine Taluks.
Hassan ..	5	Arsikere, Channarayapatna, Hassan and parts of Belur and Hole-Narsipur Taluks.
Shimoga ..	4	Channagiri, Honnali, Shimoga and Bhadravati.
Mysore ..	7	Hunsur, Periyapatna, Gundlupet, Chamarajnagar, Heggaddevanakote, Nanjangud and T.-Narsipur Taluks.
Mandya ..	8	Nagamangala, Krishnarajpet and parts of Pandavapur Taluks.
Chikmagalur..	2	Kadur and parts of Chikmagalur.
Bangalore ..	2	Parts of Kanakapura and Dodballapur Taluks.

Q.—640. Sri T. G. THIMMEGOWDA (Tiptur).—

Will the Government be pleased to state :—

(*a*) the amounts spent for Famine Relief Works in each of the areas affected by distress in the State during 1952 and 1953 ;

(*b*) the amount provided for famine relief in each area ;

(*c*) the amounts so provided for each district and taluk ?

A.—Sri KADIDAL MANJAPPA (Minister for Revenue and Public Works).

(*a*) Amount spent in each district for relief works are as below :—

	Rs.
Bangalore ..	52,000
Kolar ..	13,20,000
Tumkur ..	2,64,750
Chitaldrug ..	1,46,946
Shimoga ..	17,545
Chikmagalur ..	1,500
Mysore ..	20,901
Hassan ..	5,644
Mandya ..	2,325
Total	18,31,620

(*b*) and (*c*) Amounts provided to different districts under several items are noted hereunder.*

	*District	*Distress Relief works*	*Fodder supply*	*Assam Relief Fund*	*Takavi Loan*	*Land Improvement Loans*	*Subsidy*
		Rs.	Rs.	Rs.	Rs.	Rs.	Rs.
1	Bangalore ..	55,000	10,000	5,000	35,000	16,000	30,000
2	Kolar ..	15,24,000	1,44,500	20,000	5,05,000	80,000	3,00,000
3	Tumkur ..	4,68,000	16,000	10,000	1,95,000	40,000	60,000
4	Chitaldrug ..	2,89,000	16,500	10,000	1,90,000	10,000	50,000
5	Shimoga ..	1,22,500	..	..	97,500	8,000	25,000
6	Chikmagalur ..	32,500	2,000	..	42,500	7,000	25,000
7	Hassan ..	2,62,500	..	..	67,500	17,000	25,000
8	Mysore ..	59,000	19,000	2,500	55,000	15,000	30,000
9	Mandya ..	30,500	3,53,000	2,500	20,000	7,000	25,000

Note :—The above figures do not include the sums spent for executing the Grow More Food Works in the Distress Areas.

ಶ್ರೀ ಬಿ. ಹುಚ್ಚೇಗೌಡ.—ತಾವು ಇಲ್ಲಿ ಡಿಸ್ಪೆನ್ಸರಿ ರಿಲೀಫ್ ಕಾಂಗಾರಿಗಳಿಗಾಗಿ ಒದಗಿಸಿರುವ 28,43,000 ರೂಪಾಯಿಗಳು 52–53ನೆಯ ಸಾಲಿಗೆ ತಾನೇ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

ಶ್ರೀ ಬಿ. ಹುಚ್ಚೇಗೌಡ.—ಆ ಪೈಕಿ 18,40,521 ರೂಪಾಯಿಗಳು ಮಾತ್ರ ಖರ್ಚಾಗಿರುವುದರಿಂದ ಇನ್ನು ಳಿಯತಕ್ಕ ಸುಮಾರು 10 ಲಕ್ಷ ರೂಪಾಯಿಗಳನ್ನು ಆ ಬಾಬಿಗೆ ಖರ್ಚುಮಾಡತಕ್ಕ ಅವಶ್ಯಕತೆ ಇರುವುದಿಲ್ಲವೆಂದು ತಾವು ಭಾವಿಸಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—ರಿಲೀಫ್ ವರ್ಕ್ಸ್‌ಗಳ ಅವಶ್ಯಕತೆಯಿದ್ದರೆ ಖರ್ಚುಮಾಡಲಾಗುತ್ತದೆ. ಇಲ್ಲದಿದ್ದರೆ ಸುಮ್ಮನೆ ದುಡ್ಡನ್ನು ಮಣ್ಣಿನಲ್ಲಿ ಚೆಲ್ಲುವುದ ಕ್ಕಾಗುತ್ತದೆಯೇ!

ಶ್ರೀ ಬಿ. ಹುಚ್ಚೇಗೌಡ.—ಹಾಗಾದರೆ ನಿಮಗೆ ಅವಶ್ಯಕತೆಯಿದೆಯೆಂದು ಕಂಡುಬಂದಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಅದೂ ಖರ್ಚಾಗಿಗೆ. Pending bills ಇರಬಹುದು.

ಶ್ರೀ ಬಿ. ಹುಚ್ಚೇಗೌಡ.—ಎಲ್ಲಾದರೂ ದುಡ್ಡಿಲ್ಲ ವೆಂದು ಕೆಲಸ ನಿಂತಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ. ತಮ್ಮ ಜಿಲ್ಲೆ ಯಲ್ಲೇ ಬಿಲ್ಲುಗಳು payment ಆಗದಿರುವುದು ಬಹಳ ವಾಗಿವೆ.

ಶ್ರೀ ಬಿ. ಹುಚ್ಚೇಗೌಡ.—ಶಿವಮೊಗ್ಗ ಜಿಲ್ಲೆಯ ಡಿಸ್ಪೆನ್ಸರಿಯನ್ನಲ್ಲಿ ಮಧುಗಿರಿ ತಾಲ್ಲೂಕಿನಲ್ಲಿದುಸ್ಥಿತಿಯಿದೆಯೆಂದು ತಾವೇ ಒಪ್ಪುತ್ತೀರಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಡೆಪ್ಯುಟಿಕಮಿಷನರ discretion ಪ್ರಕಾರ ಮತ್ತು ಜಿಲ್ಲೆಯಲ್ಲಿರತಕ್ಕ ಶಾಸನ ಸಭಾ ಸದಸ್ಯರ ಸಲಹೆಯ ಮೇರೆಗೆ ಎಲ್ಲಾ ಕಡೆಯಲ್ಲೂ ಖರ್ಚುಮಾಡಿದ್ದೇವೆ.

ಶ್ರೀ ಬಿ. ಹುಚ್ಚೇಗೌಡ.—ಮಧುಗಿರಿ ತಾಲ್ಲೂಕಿನಲ್ಲ ನಿರ್ಗತಿಕರಿಗೆ ಆಹಾರ ಪದಾರ್ಥಗಳನ್ನು ಹಂಚಿ ಗಂಜಿ ಕೇಂದ್ರಗಳನ್ನು ತೆಗೆದಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್ ಬೇಕು. ಆದರೆ, ಒಂದು ವಿಷಯವನ್ನು ತಾವೇ ಕ್ಷಾಮ ಪರಿಹಾರ ಕೇಂದ್ರ ಸಮಿತಿಯ ಸದಸ್ಯರಾಗಿರುವುದರಿಂದ ತಮಗೇ ತಿಳಿದಿರಬೇಕು. ಗಂಜಿಕೇಂದ್ರಗಳನ್ನು ಸರ್ಕಾರದವರೇ ತೆಗೆಯಬೇಕಾದ್ದಿಲ್ಲ. ಖಾಸಗಿಯವರು ಗಂಜಿಕೇಂದ್ರ ಗಳನ್ನು ಪ್ರಾರಂಭಿಸಿದರೂ, ಸರ್ಕಾರದವರು ಅವರಿಗೆ ದವನ ಒದಗಿಸಬಹುದೆಂದು ತೀರ್ಮಾನವಾಗಿದ್ದುದು ತಮಗೇ ಗೊತ್ತಿರಬಹುದು.

ಶ್ರೀ ಬಿ. ಹುಚ್ಚೇಗೌಡ.—ಆಹಾರ ಪದಾರ್ಥಗಳನ್ನು ಮುಫತ್ತಾಗಿ ಎಷ್ಟು ಹಂಚಿದೆ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಬಿ. ಹುಚ್ಚೇಗೌಡ.—ತಕಾವಿ ಸಾಲಗಳನ್ನು ಧಾರಾಳವಾಗಿ ಕೊಡುತ್ತೇವೆಂದು ಹೇಳಿದಿರಿ. ತುಮಕೂರು ಡಿಸ್ಪೆನ್ಸರಿಯಲ್ಲಿ ಎಷ್ಟು ಕೊಟ್ಟಿದ್ದೀರಿ?

Sri KADIDAL MANJAPPA.—It was answered last week.

ಶ್ರೀ ಬಿ. ಹುಚ್ಚೇಗೌಡ.—ತುಮಕೂರಿಗೆ ತಕಾವಿ ಸಾಲ 1,95,000 ರೂಪಾಯಿಗಳನ್ನು ಕೊಟ್ಟಿದೆಯೆಂದು ಹೇಳಿದಿರಿ. ಆದರೂ ತಾಲ್ಲೂಕಿಗೆ ಎಗಡೆರಡು ಸಾವಿರ ರೂಪಾಯಿಗಳ ಮೇಲೆ ಕೊಟ್ಟಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ!

ಶ್ರೀ ಕಡಿದಾಳ್ ಮಂಜಪ್ಪ.—ನಾವು ಕೊಟ್ಟಿರುವ ಹಣವನ್ನು ಹೇಳಿದ್ದೇವೆ.

ಶ್ರೀ ಬಿ. ಹುಚ್ಚೇಗೌಡ.—ಆದರೆ, ಖರ್ಚಾಗಿರುವು ದೆಷ್ಟು?

ಶ್ರೀ ಕಡಿದಾಳ್ ಮಂಜಪ್ಪ.—1,77,000 ರೂಪಾಯಿ ಗಳು.

ಶ್ರೀ ಬಿ. ಹುಚ್ಚೇಗೌಡ.—ಹಾಗಾದರೆ ಜಮೀನು ಆಬಾದು ಸಾಲ ಕೊಟ್ಟಿರುವುದೆಷ್ಟು?

ಶ್ರೀ ಕಡಿದಾಳ್ ಮಂಜಪ್ಪ.—40,000 ರೂಪಾಯಿ ಗಳು.

ಶ್ರೀ ಬಿ. ಹುಚ್ಚೇಗೌಡ.—ಇನ್ನೂ ಅರ್ಜಿಗಳು ಬೇಕಾದಷ್ಟು ಬಾಕಿಯಿರುವುದರಿಂದ, ಅವರಿಗೂ ಕೊಡುವುದಕ್ಕೆ ಪ್ರಯತ್ನಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಅರ್ಜಿಗಳು ಬೇಕಾ ದಷ್ಟಿವೆ, ನಿಜ. ಹಣವಿಲ್ಲದಿರುವುದರಿಂದ ಬಾಕಿ ಅರ್ಜಿದಾರರಿಗೆ ಹಣಕೊಡುವುದಕ್ಕಾಗಿಲ್ಲ.

ಶ್ರೀ ಬಿ. ಹುಚ್ಚೇಗೌಡ.—ಹಾಗಾದರೆ ಧಾರಾಳ ವೆಂದರೆ ಅರ್ಥವೇನು?

ಶ್ರೀ ಕಡಿದಾಳ್ ಮಂಜಪ್ಪ.—ನಮ್ಮ ಶಕ್ತಿ ಮೀರಿ ಎಂದರ್ಥ.

ಶ್ರೀ ಬಿ. ಹುಚ್ಚೇಗೌಡ.—ಒಟ್ಟಿನಲ್ಲಿ ಅಲ್ಲಿ ನಮ್ಮ ತಾಲ್ಲೂಕಿನಲ್ಲಿ ಬಹಳ ತೀವ್ರ ಪರಿಸ್ಥಿತಿಯಿರುವುದರಿಂದ ತಕ್ಷಣ ಕೆಲವು ಕಾಮಗಾರಿಗಳು ಬಾಕಿಯಿರುವುದನ್ನು ತೆಗೆದುಕೊಂಡು ಮುಗಿಸುವುದಕ್ಕೆ ಸಾಧ್ಯವಿಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ವೈ. ನೀಲೇಗೌಡ.—ಮಂಡ್ಯ ಡಿಸ್ಪೆನ್ಸರಿಗೆ 30,500 ರೂಪಾಯಿಗಳನ್ನು ಕೊಟ್ಟಿರುವುದರಲ್ಲಿ ಕೇವಲ 2,325 ರೂಪಾಯಿಗಳನ್ನು ಖರ್ಚುಮಾಡಿರುವುದಕ್ಕೆ ಕಾರಣವೇನು?

ಶ್ರೀ ಕಡಿದಾಳ್ ಮಂಜಪ್ಪ.—ಅಲ್ಲಿ ಕ್ಷಾಮ ಅಷ್ಟೊಂದಿಲ್ಲ.

ಶ್ರೀ ಬಿ. ವೈ. ನೀಲೇಗೌಡ.—ಮಂಡ್ಯ ಡಿಸ್ಪೆನ್ಸರಿಗೆ ನಲ್ಲಿ ಎಷ್ಟು ತಾಲ್ಲೂಕಿನಲ್ಲಿ ಕ್ಷಾಮ ಪರಿಸ್ಥಿತಿಯಿದೆಯೆಂದು ಗೊತ್ತಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಉತ್ತರ ಕೊಟ್ಟಿದೆ.

ಶ್ರೀ ಬಿ. ವೈ. ನೀಲೇಗೌಡ.—ಶ್ರೀರಂಗಪಟ್ಟಣ, ಪಾಂಡವಪುರ ರೈಲ್ವೆಸ್ಟೇಷನ್‌ಗಳಿಂದ ಕೋಲಾರ ಡಿಸ್ಪೆನ್ಸ ರಿಗೆ ಹುಲ್ಲು ಕಳುಹಿಸಿದಾಗ, ಆ ಹುಲ್ಲಿಗೆ ನೀರು ಹಾಕಿ ತ್ತೆಂದು ಅಲ್ಲಿನ ಡೆಪ್ಯುಟಿಕಮಿಷನರು ತಿಳಿಸಿದ್ದು ಗೊತ್ತೆ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

ಶ್ರೀ ಬಿ. ವೈ. ನೀಲೇಗೌಡ.—ಈ ವಿಚಾರದಲ್ಲಿ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಕಡಿದಾಳ್ ಮಂಜಪ್ಪ.—ವಿಚಾರಣೆ ಮಾಡಿದ ವರದಿ ಇನ್ನೂ ಬಂದಿಲ್ಲ.

ಶ್ರೀ ಬಿ. ವೈ. ನೀಲೇಗೌಡ.—ವಿಚಾರಣೆ ಇನ್ನೂ ಪೂರ್ತಿಯಾಗಿಲ್ಲವೇ!

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

ಶ್ರೀ ಬಿ. ವೈ. ನೀಲೇಗೌಡ.—ವಿಚಾರಣೆ ನಡೆಸುತ್ತಿ ರುವವರು ಯಾರು?

ಶ್ರೀ ಕಡಿದಾಳ್ ಮಂಜಪ್ಪ.—ಸಂಬಂಧಪಟ್ಟ ಡೆಪ್ಯುಟೀ ಕಮಿಷನರು.

ಶ್ರೀ ಬಿ. ವೈ. ನೀಲೇಗೌಡ.—ನಾಗಮಂಗಲ ತಾಲ್ಲೂಕಿನಲ್ಲಿ ಕ್ಷಾಮ ಪರಿಸ್ಥಿತಿಯಿದ್ದು ಬಹಳ ಜನರು ಕಷ್ಟಪಡುತ್ತಿದ್ದಾರೆಂಬುದು ಗೊತ್ತಿದೆಯೇ!

ಶ್ರೀ ಕಡಿದಾಳ್ ಮಂಜಪ್ಪ.—ನಾಗಮಂಗಲ ತಾಲ್ಲೂಕು ಕ್ಷಾಮ ಪೀಡಿತ ಪ್ರದೇಶದಲ್ಲಿ ಸೇರಿಲ್ಲ.

ಶ್ರೀ ಬಿ. ವೈ. ನೀಲೇಗೌಡ.—ಬಹಳ ಜನರು ಅಲ್ಲಿ ಕಷ್ಟ ಸ್ಥಿತಿಯಲ್ಲಿದ್ದಾರೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಮಾನ್ಯ ಸದಸ್ಯರೇ ಒಂದು ಸಲ ತಿಳಿಸಿದ್ದರು.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಚಿಕ್ಕಮಗಳೂರು ಜಲ್ಲೆಯಲ್ಲಿ 1,500 ರೂಪಾಯಿಗಳು ಮಾತ್ರ ಖರ್ಚಾಗಿರುವುದಕ್ಕೆ ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಅಲ್ಲಿ ಹೆಚ್ಚಿಗೆ ಅವಶ್ಯಕತೆಯಿಲ್ಲವೆಂದು ಭಾವನೆಯಿದೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಕಡೂರು ತಾಲ್ಲೂಕು ಮತ್ತು ಚಿಕ್ಕಮಗಳೂರು ತಾಲ್ಲೂಕಿನ ಕೆಲವು ಪ್ರದೇಶಗಳಲ್ಲಿ ಕ್ಷಾಮ ಪರಿಸ್ಥಿತಿಯಿದೆಯೆಂಬುದನ್ನು ಮಂತ್ರಿಗಳವರು ಅಲ್ಲಿಗೆ ಬಂದಾಗ್ಗೆ ಅವರ ಗಮನಕ್ಕೆ ತಂದು ಅವರು ಕ್ಷಾಮವಿದೆಯೆಂಬುದನ್ನು ಮನಗೊಳ್ಳುವಂತೆ ಮಾಡಿದರೂ ಖರ್ಚು ಮಾಡದಿರುವುದಕ್ಕೆ ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಖರ್ಚು ಮಾಡುವುದನ್ನು ಜಿಲ್ಲಾ ಕ್ಷಾಮ ಪರಿಹಾರ ಸಮಿತಿಗೆ ಬಿಡಲಾಗಿದೆ. ಆ ಸಮಿತಿಯಲ್ಲಿ ಮಾನ್ಯ ಸದಸ್ಯರು ಇದ್ದಾರೆಂದು ಗೊತ್ತಿದೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಖರ್ಚಾಗಿದ್ದರೂ ಇಲ್ಲಿ ಕೊಟ್ಟಿಲ್ಲವೆಂದು ಹೇಳಬಹುದೇ ?

(No answer)

ಶ್ರೀ ಜೆ. ಮಹಮ್ಮದ್ ಇಮಾಂ.—ಕೋಲಾರ ಡಿಸ್ಟ್ರಿಕ್ಟಿಗೆ ಮಿಕ್ಕ ಎಲ್ಲಾ ಡಿಸ್ಟ್ರಿಕ್ಟ್‌ಗಳಿಗಿಂತ ಹೆಚ್ಚಿಗೆ ತಕಾವಿಸಾಲ, ಜಪ್ತಿನು ಆಬಾದು ಸಾಲ ಮುಂತಾದುವುಗಳನ್ನು ಕೊಡುವುದಕ್ಕೆ ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಹೋದವರ್ಷ ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಅಲ್ಲಿನ ಪರಿಸ್ಥಿತಿ ಸ್ವಲ್ಪ ಬಿಗಡಾಯಿಸಿತ್ತು, ಆದ್ದರಿಂದ ಕೊಟ್ಟಿದೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಅದೇ ರೀತಿಯಲ್ಲಿ ಚಿತ್ರದುರ್ಗ, ತುಮಕೂರು ಡಿಸ್ಟ್ರಿಕ್ಟ್‌ಗಳಲ್ಲಿಯೂ ಪರಿಸ್ಥಿತಿ ಬಿಗಡಾಯಿಸಿತೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಅನಂತರ ಕೆಲವು ತಿಂಗಳಲ್ಲೇ ಪರಿಸ್ಥಿತಿ ಸುಧಾರಿಸಿತು.

ಶ್ರೀ ಜೆ. ಮಹಮ್ಮದ್ ಇಮಾಂ.—ಕೋಲಾರ ಡಿಸ್ಟ್ರಿಕ್ಟಿನಲ್ಲಿ ಗರಾಟೆ ಹೆಚ್ಚಿಗೆ ಮಾಡುತ್ತಾರೆಂದು ಹೆಚ್ಚಿಗೆ ಕೊಟ್ಟಿರಾ ?

ಶ್ರೀ ಕಡಿದಾಳ್ ಮಂಜಪ್ಪ.—ಗರಾಟೆಗೆ ಹೆದರಿ ಹೆಚ್ಚಿಗೆ ಕೊಡುವುದಿಲ್ಲ.

ಶ್ರೀ ಜೆ. ಮಹಮ್ಮದ್ ಇಮಾಂ.—ಕೋಲಾರ ಡಿಸ್ಟ್ರಿಕ್ಟಿಗೆ ಕೊಟ್ಟಿರುವಂತೆ ದೂರದಲ್ಲಿರುವ ಡಿಸ್ಟ್ರಿಕ್ಟುಗಳಿಗೂ ಹೆಚ್ಚಿಗೆ ಕೊಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ದೂರ, ಹತ್ತಿರ ಎಂದು ನೋಡಿಕೊಂಡು ಕೊಡುವುದಿಲ್ಲ. ಎಲ್ಲಾ ಡಿಸ್ಟ್ರಿಕ್ಟ್‌ಗಳಿಗೂ ಅಲ್ಲಿನ ಪರಿಸ್ಥಿತಿ ನೋಡಿಕೊಂಡು ಕೊಡುತ್ತೇವೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಕೋಲಾರ ಡಿಸ್ಟ್ರಿಕ್ಟಿನವರು ಆಂಧ್ರ ಪ್ರಾಂತ್ಯಕ್ಕೆ ಸೇರುತ್ತೇವೆಂದು ಹೇಳಿಂವಾಗ ಅಲ್ಲಿಗೆ ಖರ್ಚು ಮಾಡುವುದನ್ನು ಕಡಮೆ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಯೋಚನೆ ಮಾಡೋಣ.

Takavi and land improvement loans granted in Magadi Taluk.

Q.—608. Sri S. SIDDAPPA (Magadi).—

Will the Government be pleased to state :—

(*a*) the amount allotted by them during 1951-52 for Magadi Tanluk towards land improvement loans, takavi loans, etc.;

(*b*) the number of loan applications received and the amount of loan applied for, the number of raiyats who were granted such loans and the amount of loans granted ?

A.—Sri KADIDAL MANJAPPA (Minister for Revenue and Public Works).—

		Rs.
(*a*) Land Improvement Loan	..	600
Takavi Loan	..	700

(*b*) *Land Improvement Loan.*—Five applications involving a sum of Rs. 5,000 were for disposal out of which one application involving a sum of Rs. 500 was granted.

Takavi Loan.—Ten applications involving a sum of Rs. 7,650 were for disposal, out of which one application involving a sum of Rs. 250 was sanctioned.

ಶ್ರೀ ಎಸ್. ಸಿದ್ದಪ್ಪ.—ಮಾಗಡಿ ತಾಲ್ಲೂಕಿಗೆಲ್ಲಾ ಜಪ್ತಿನು ಆಬಾದಿನ ಸಾಲಕ್ಕಾಗಿ ಬಂದಿದ್ದ ಅರ್ಜಿಗಳ ಸಂಖ್ಯೆ ಎಷ್ಟೇಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು, ಎರಡೇ.

ಶ್ರೀ ಎಸ್. ಸಿದ್ದಪ್ಪ.—ಆ ಪೈಕಿ ಒಬ್ಬರಿಗೆ ಮಾತ್ರ ಸಾಲಕೊಟ್ಟು ಉಳಿದವರಿಗೆ ಕೊಡದಿರುವುದಕ್ಕೆ ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಮಿಕ್ಕವರು ಸರಿಯಾದ ಸೆಕ್ಯೂರಿಟಿ ಕೊಡಲಲ್ಲವೆಂದು ಕಾಣುತ್ತದೆ.

ಶ್ರೀ ಎಸ್. ಸಿದ್ದಪ್ಪ.—ರೋನ್ ಅರ್ಜಿಗಳು ಬಂದಿದ್ದರಲ್ಲಿ ಒಬ್ಬರಿಗೆ ಮಾತ್ರ ಸಾಲಕೊಟ್ಟು ಉಳಿದಿರುವವರಿಗೆ ಕೊಡದಿರುವುದರಿಂದ, ಬಡವರಿಗೆ ತೊಂದರೆ ಮಾಡಿದಂತಾಗಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಎಸ್. ಸಿದ್ದಪ್ಪ.—ಈ ಸಾಲಗಳನ್ನು ಕೊಡುವ ಉದ್ದೇಶ ಆ ಪ್ರಾಂತ್ಯದ ರೈತರಿಗೆ ಅನುಕೂಲವಾಗಬೇಕೆಂದಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.